ಆಸೊಲೇಟರ್ಸ್ ಇತ್ಯಾದಿಗಳು ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ೧೧೦ ಕೆ.ವಿ. ಬ್ರೇಕರ್‌ಗಳನ್ನು ಈಗಾಗಲೇ ಒದಗಿಸಲಾಗಿದೆ. ಈ ಕೆಲಸವನ್ನು ೧೯೯೦-೯೧ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.

೮. ಶಿರಹಟ್ಟಿ ತಾಲ್ಲೂಕಿನ ಶಿಗ್ಲಿಗ್ರಾಮದಲ್ಲಿ ಇಂದಿರಾ ಆವಾಸ್ ಮನೆಗಳನ್ನು ಅನರ್ಹ ಪಟ್ಟ ಭದ್ರ ಹಿತಾಸಕ್ತಿಗಳಿಗೆ ಮಂಜೂರು ಮಾಡಿರುವುದು

ಶ್ರೀ ಎಸ್. ಎನ್. ಪಾಟೀಲ್. —ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಜನರಿಗಾಗಿ ಗ್ರೂಪ್ ಹೌಸ್ ಯೋಜನೆಯಡಿಯಲ್ಲಿ ಇಂದಿರಾ ಆವಾಸ್ ಮನೆಗಳನ್ನು ಕಟ್ಟಿಸಿದ್ದು ಅವುಗಳನ್ನು ನಿಜವಾಗಿ ಕೊಡಬೇಕಾದಂತಹ ಫಲಾನುಭವಿಗಳಿಗೆ ಕೊಡದೇ ಪಟ್ಟಭದ್ರ ಹಿತಾಸಕ್ತಿಗಳ ಹಿಂಬಾಲಕರಿಗೆ ಪ್ರಾಮುಖ್ಯವಾಗಿ ಪರಿಶಿಷ್ಟ ಜಾತಿಯಲ್ಲದವರಿಗೆ ಮಂಜೂರು ಮಾಡಿರುವುದು. ಹೀಗೆ ಮಾಡುವಾಗ ಅಕ್ರಮ ಸಂಪಾದನೆ ಆಗಿದೆ ಎಂದು ಸಾರ್ವಜನಿಕವಾಗಿ ಕೇಳಿಬರುತ್ತಿದೆ. ಈ ವಿಷಯವನ್ನು ಧಾರವಾಡ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಅಮೂಲಾಗ್ರವಾಗಿ ವಿಂಡಿದ್ದರೂ ಪರಿಶಿಷ್ಟ ವರ್ಗದ ಜನರಿಗಾದ ಅನ್ಯಾಯವನ್ನು ಸರಿಪಡಿಸಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಸದರಿ ಅನ್ಯಾಯವನ್ನು ಸರಿಪಡಿಸಿ ನಿಜವಾದ ಪರಿಶಿಷ್ಟ ವರ್ಗದ ಜನರಿಗೆ ಸದರಿ ಮನೆಗಳನ್ನು ಹಂಚಿಕೆ ಮಾಡಲು ಕೋರಿ ಆ ಜನರಿಂದ ೧೫ ದಿನ ಸತ್ಯಾಗ್ರಹ ನಡೆಸಿದ್ದು ಉಂಟು. ಈ ಬಗ್ಗೆ ಕಾನೂನು ಪ್ರಕಾರ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವುದಲ್ಲದೆ ನಿಜವಾದ ಪರಿಶಿಷ್ಟ ವರ್ಗದ ಜನರಿಗೆ ಸದರಿ ಮನೆಗಳನ್ನು ಹಂಚಲು ಕ್ರಮ ತೆಗೆದುಕೊಳ್ಳಲು ಕೋರಿದ್ದೇನೆ. ಮತ್ತು ಮನೆ ಹಂಚಲ್ಪಟ್ಟ ಪರಿಶಿಷ್ಟ ವರ್ಗವಲ್ಲದ ಜನರ ವಿವರವನ್ನು ಪ್ರಕಟಿಸಲು ಕೋರಿದ್ದೇನೆ.

ದಿನಾಂಕ ೧೭-೩-೧೯೯೦ರಂದು ಸಾಮಾಜಿಕ ನ್ಯಾಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದಾಗ, ಕೆಲವು ಮನೆಗಳು ಪರಿಶಿಷ್ಟ ಜನರಿಗೆ ಸೇರಿದವುಗಳೆಂಬಂತೆ ಮಂಡಲ ಪಂಚಾಯಿತಿಯವರು ನಾಮಫಲಕಗಳನ್ನು ಹಾಕಿಸಿ, ಅವರು ಗ್ರಾಮ ಬಿಟ್ಟಕೂಡಲೇ ಆ ಫಲಕಗಳನ್ನು ತೆಗೆಸಿ ಮೊದಲಿದ್ದವರೇ ವಾಸವಾಗಿದ್ದಾರೆ. ಈ ಬಗ್ಗೆ ನಿಜಾಂಶ ತಿಳಿಯಲು ಸಿ. ಒ. ಡಿ. ತನಿಖೆಗೆ ಆಜ್ಞೆ ಮಾಡಲು ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಧಾರವಾಡ ಜಿಲ್ಲಾ ಶಿರಹಟ್ಟಿ ತಾಲ್ಲೂಕಿನಲ್ಲಿ ಶಿಗ್ಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಜನರಿಗಾಗಿ ಗ್ರೂಪ್ ಹೌಸ್ ಯೋಜನೆಯಡಿಯಲ್ಲಿ ಇಂದಿರಾ ಆವಾಸ್ ಮನೆಗಳನ್ನು ಕಟ್ಟಿಸಿದ್ದು ಅವುಗಳನ್ನು ನಿಜವಾಗಿ ಕೊಡಬೇಕಾದಂತಹ ಫಲಾನುಭವಿಗಳಿಗೆ ಕೊಡದೇ ಪರಿಶಿಷ್ಟ ಜಾತಿಯಲ್ಲದವರಿಗೆ ಮಂಜೂರು ಮಾಡಿರುವುದರ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿರುತ್ತಾರೆ. ಧಾರವಾಡ ಜಿಲ್ಲಾ ಪರಿಷತ್ತಿಗೆ ನಾನು ಭೇಟಿ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳ ಪರಿಶೀಲನೆ ಮಾಡುವ ಸಮಯದಲ್ಲಿ ಸದರಿ ವಿಷಯವನ್ನು ನನ್ನ ಗಮನಕ್ಕೆ ಬಂದಿರುತ್ತದೆ. ಇಂದಿರಾ ಆವಾಸ್ ಮನೆಗಳನ್ನು ಹಂಚಿಕೆ ಮಾಡಿರುವ ವಿಷಯದಲ್ಲಿ ಉಂಟಾಗಿರುವ ದೋಷವನ್ನು ಸರಿಪಡಿಸಿ ಪರಿಶಿಷ್ಟ ಜಾತಿಗೆ ಸೇರಿದ ಅರ್ಹ ಫಲಾನುಭವಿಗಳಿಗೆ, ಮನೆಗಳನ್ನು ಹಂಚುವಂತೆ ಧಾರವಾಡ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಸಿಬ್ಬಂದಿ ಸಮೇತ ಹೋಗಿ ಪೋಲೀಸ್ ನೆರವಿನೊಂದಿಗೆ ಕ್ರಮ ತೆಗೆದುಕೊಳ್ಳುವಂತೆ ಆದೇಶವಿತ್ತಿರುತ್ತೇನೆ.

ಶಾಸನಾ ರಚನಾ ಕಲಾಪಗಳು

೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರ ಪರವಾಗಿ ನಾನು "೧೯೯೦ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ತಿದ್ದುಪಡಿ) ವಿಧೇಯಕವನ್ನು ಸಭೆ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ"